ಕರ್ನಾಟಕ ಸರ್ಕಾರ

Phone No.:08282 266355
FAX No.08282 266647
E mail: **dcfbdvt@yahoo.in**

ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಭದ್ರಾವತಿ ವಿಭಾಗ,
ಭದ್ರಾವತಿ. – 577301

ಸಂ:ಬಿ2.ಭೂಮಿ.ಸಿಆರ್- 21/2022-23. ದಿನಾಂಕ:29-06-2022.

ಗೆ,

Chief Engineer,
Karnataka Neeravari Nigam Ltd.,
Upper Tunga Project Zone,
Shimoga. ಇವರಿಗೆ.

**ಪ್ಲಾಸ್ಟಿಕ್ ಬಳಸಬೇಡಿ**

ಸ್ವಾತಂತ್ರ್ಯದ ಅಮೃತ ಮಹೋತ್ಸವ

ಮಾನ್ಯರೆ,

ವಿಷಯ :- ಇಟ್ಟಿಗೆಹಳ್ಳಿ ಗ್ರಾಮ, ಹೊಳೆಹೊನ್ನೂರು-II, ಅರಣ್ಯ ಪ್ರದೇಶದ ಸರ್ವೆ ನಂ.17 (20 ಹೊಸ)ನಲ್ಲಿ ಚೆಕ್ ಡ್ಯಾಮ್ ಮತ್ತು ಸಂಪರ್ಕ ರಸ್ತೆಯೊಂದಿಗೆ ಹೊಸ ಟ್ಯಾಂಕ್ ನಿರ್ಮಾಣಕ್ಕಾಗಿ ಪುನರ್ಭತಿ ಮಾಡುವ ಕುರಿತು ಪರ್ಯಾಯವಾಗಿ ನೀಡಲಾದ ಜಮೀನಿನ ಸ್ಯೂಟಬಿಲಿಟಿ ಸರ್ಟಿಫಿಕೇಟ್ ನೀಡುವ ಬಗ್ಗೆ.(Land suitability Certificate)
(Proposal No.FP/KA/WATER/146299/2021)

ಉಲ್ಲೇಖ
1. ಈ ಕಛೇರಿ ಸಮ ಸಂಖ್ಯೆ ಪತ್ರ ದಿನಾಂಕ:28-06-2022.
2. ವಲಯ ಅರಣ್ಯಾಧಿಕಾರಿ, ಶಾಂತಿಸಾಗರ ವಲಯ, ಮಾವಿನಕಟ್ಟೆ ಇವರ ಕಛೇರಿ ಪತ್ರ ಸಂ:ವಅಅ.ಶಾವ.403/2022-23 ದಿನಾಂಕ:28-06-2022.
3. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಚನ್ನಗಿರಿ ಉಪ ವಿಭಾಗ, ಚನ್ನಗಿರಿ ಇವರ ಕಛೇರಿ ಪತ್ರ ಸಂ: /2022-23 ದಿನಾಂಕ:29-06-2022.

***

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಇಟ್ಟಿಗೆಹಳ್ಳಿ ಗ್ರಾಮ, ಹೊಳೆಹೊನ್ನೂರು-II, ಶಿವಮೊಗ್ಗ ಜಿಲ್ಲೆಯ ಭದ್ರಾವತಿ ವಿಭಾಗದ ಶಾಂತಿಸಾಗರ ವಲಯ ವ್ಯಾಪ್ತಿಯ ಈ ಕೆಳಕಂಡ ಗ್ರಾಮಗಳಲ್ಲಿ 12.1801ಹೆ. ಅರಣ್ಯ ಪ್ರದೇಶದ ಸರ್ವೆ ನಂ.17 (20 ಹೊಸ)ನಲ್ಲಿ ಚೆಕ್ ಡ್ಯಾಮ್ ಮತ್ತು ಸಂಪರ್ಕ ರಸ್ತೆಯೊಂದಿಗೆ ಹೊಸ ಟ್ಯಾಂಕ್ ನಿರ್ಮಾಣಕ್ಕಾಗಿ ಪುನರ್ಭತಿ ಮಾಡುವ ಕುರಿತು, ಪರ್ಯಾಯವಾಗಿ ನೀಡಲಾದ ಜಮೀನಿನ ಸ್ಯೂಟಬಿಲಿಟಿ ಸರ್ಟಿಫಿಕೇಟ್ ನೀಡುವ ಬಗ್ಗೆ(Land suitability Certificate) ಪರಿವೇಶ್ ವೆಬ್ ಪೋರ್ಟಲ್‌ನಲ್ಲಿ ನೀವು ಅರ್ಜಿ ಸಲ್ಲಿಸಿದ್ದು, ಸದರಿ ಯೋಜನೆಯಲ್ಲಿ ಬಿಡುಗಡೆಯಾಗುವ ಅರಣ್ಯ ಭೂಮಿಗೆ ಪರ್ಯಾವಾಗಿ ಪರಿಹರಾತ್ಮಕ ನೆಡುತೋಪು ಬೆಳೆಸಲು ಸಮನಾಂತರ ಕಂದಾಯ ಭೂಮಿಯನ್ನು ನೀಡುವ ಸಲುವಾಗಿ **ಭದ್ರಾವತಿ ತಾಲ್ಲೂಕು ಹೊಳೆಹೊನ್ನೂರು ಹೋಬಳಿ, ಗುಡಮಘಟ್ಟ ಗ್ರಾಮದ ಸರ್ವೆ ನಂ.43(ಪಾರ್ಟ್)ರಲ್ಲಿ 12.1801 ಎಕರೆ/ಗುಂಟೆ** ಭೂಮಿಯನ್ನು ಗುರುತಿಸಿರುತ್ತೀರ. ಸದರಿ ಗುರುತಿಸಿರುವ ಅರಣ್ಯೇತರ ಭೂಮಿಯು ಪರಿಹರಾತ್ಮಕ ನೆಡುತೋಪು ಬೆಳೆಸಲು ಯೋಗ್ಯವೇ? ಅಥವಾ ಇಲ್ಲವೇ? ಎಂಬ ಬಗ್ಗೆ ***"Land Suitability Certificate"*** ನೀಡಲು ಕೋರಿಕೊಂಡಿರುತ್ತೀರಿ.

ಅದರರಂತೆ, **ಭದ್ರಾವತಿ ತಾಲ್ಲೂಕು ಹೊಳೆಹೊನ್ನೂರು ಹೋಬಳಿ, ಗುಡಮಘಟ್ಟ ಗ್ರಾಮದ ಸರ್ವೆ ನಂ.43(ಪಾರ್ಟ್)ರಲ್ಲಿ 12.1801 ಎಕರೆ ಗುಂಟೆ** ಭೂಮಿಯಲ್ಲಿ ಪರಿಹರಾತ್ಮಕ ನೆಡುತೋಪು ಬೆಳೆಸುವ ಪ್ರದೇಶವನ್ನು ಅಂಶವಾರು ಪರಿಶೀಲಿಸಿ ಮಾಹಿತಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಮುಖಾಂತರ ಸಲ್ಲಿಸಲು ವಲಯ ಅರಣ್ಯಾಧಿಕಾರಿ, ಶಾಂತಿಸಾಗರ ವಲಯ, ಮಾವಿನಕಟ್ಟೆ ಇವರಿಗೆ ಉಲ್ಲೇಖ ಪತ್ರ (1)ರಲ್ಲಿ ತಿಳಿಸಲಾಗಿರುತ್ತದೆ.

ಉಲ್ಲೇಖ ಪತ್ರ(2) & (3)ರಲ್ಲಿ ಮೇಲ್ಕಂಡ ಸ್ಥಳವನ್ನು ಪರಿಶೀಲಿಸಿ, ಸದರಿ ಪ್ರದೇಶವು ನೈಸರ್ಗಿಕ ಅರಣ್ಯವನ್ನು ಒಳಗೊಂಡಿದೆ, ಆದ್ದರಿಂದ ಇಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಸಾಧ್ಯವಿಲ್ಲವೆಂದು ಸದರಿ ಸ್ಥಳದಲ್ಲಿರುವ ಡೆನ್ಸಿಟಿ ಆಫ್ ವೆಜಿಟೇಷನ್, ಜೀವ ವೈವಿಧ್ಯತೆ, ವಾರ್ಷಿಕ ಮಳೆ ಪ್ರಮಾಣ ಹಾಗೂ ಸದರಿ ಪ್ರದೇಶಕ್ಕೆ ಸಂಬಂಧಿಸಿದ ಚೆಕ್ಕುಬಂದಿ ವಿವರಗಳೊಂದಿಗೆ ಈ ಕಛೇರಿಗೆ ವಲಯ ಅರಣ್ಯಾಧಿಕಾರಿ, ಶಾಂತಿಸಾಗರ ವಲಯ, ಮಾವಿನಕಟ್ಟೆ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಚನ್ನಗಿರಿ ಉಪ ವಿಭಾಗ, ಚನ್ನಗಿರಿ ಇವರು ವರದಿಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು, ನೀವು ಗುರುತಿಸಿರುವ ಭದ್ರಾವತಿ ತಾಲ್ಲೂಕು ಹೊಳೆಹೊನ್ನೂರು ಹೋಬಳಿ, ಗುಡಮಘಟ್ಟ ಗ್ರಾಮದ ಸರ್ವೆ ನಂ.43(ಪಾರ್ಟ್)ರಲ್ಲಿ 12.1801 ಎಕರೆ/ಗುಂಟೆ ಪ್ರದೇಶವು ನೈಸರ್ಗಿಕ ಅರಣ್ಯವನ್ನು ಒಳಗೊಂಡಿರುವುದರಿಂದ ಇಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಸಾಧ್ಯವಿರುವುದಿಲ್ಲ. ಆದ್ದರಿಂದ ಸದರಿ ಪ್ರದೇಶದ ಬದಲು ಬೇರೆ ಪ್ರದೇಶವನ್ನು ಗುರುತಿಸಿ, ಈ ಪತ್ರಕ್ಕೆ ಲಗತ್ತಿಸಿರುವ Parveesh online Part-2 Sl.No.9 Details of Compensatory afforestation scheme ವಿವರವನ್ನು ಭರ್ತಿ ಮಾಡಿ ಈ ಕಛೇರಿಗೆ ವರದಿ ಸಲ್ಲಿಸಲು ಕೋರಿದೆ.

ನಿಮ್ಮ ವಿಶ್ವಾಸಿ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಭದ್ರಾವತಿ ವಿಭಾಗ, ಭದ್ರಾವತಿ.

1) ಪ್ರತಿಯನ್ನು ಉಪ ವಿಭಾಗಾಧಿಕಾರಿ, ಶಿವಮೊಗ್ಗ ಉಪ ವಿಭಾಗ, ಶಿವಮೊಗ್ಗ ಇವರ ಮಾಹಿತಿಗೆ ಕಳುಹಿಸಿದೆ.
2) ಪ್ರತಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಚನ್ನಗಿರಿ ಉಪ ವಿಭಾಗ, ಚನ್ನಗಿರಿ ಇವರಿಗೆ ಮಾಹಿತಿ ಕಳುಹಿಸಿದೆ.
3) ಪ್ರತಿಯನ್ನು ವಲಯ ಅರಣ್ಯಾಧಿಕಾರಿ, ಶಾಂತಿಸಾಗರ ವಲಯ, ಮಾವಿನಕಟ್ಟೆ ಇವರ ಮಾಹಿತಿಗೆ ಕಳುಹಿಸಿದೆ.